# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | **18 (200)** (ಕಂದಾಯ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ) |
| ಸದಸ್ಯರ ಹೆಸರು | ಶ್ರೀ ಮುನಿರಾಜುಗೌಡ ಪಿ.ಎಂ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 14-02-2024 |
| ಉತ್ತರಿಸುವವರು | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು ಹಾರೋಹಳ್ಳಿ ಗ್ರಾಮದ ಸರ್ವೆ ನಂ.74ರಲ್ಲಿ ದಾಖಲಾಗಿರುವ ಖಾತೆಗಳ ನೈಜತೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಪೌರಾಡಳಿತ ನಿರ್ದೇಶನಾಲಯ ಇವರು ಜಿಲ್ಲಾಧಿಕಾರಿಗಳು, ರಾಮನಗರ ಇವರಿಗೆ ಪತ್ರ ಬರೆದಿರುವುದು ನಿಜವೇ; ಬರೆದಿದ್ದಲ್ಲಿ ಸದರಿ ಪತ್ರ ಹಾಗೂ ವರದಿಯ ಪ್ರತಿಯನ್ನು ನೀಡುವುದು; | ಹೌದು, ಹಾರೋಹಳ್ಳಿ ಗ್ರಾಮದ ಸರ್ವೆ ನಂ.74 ರಲ್ಲಿ ದಾಖಲಾಗಿರುವ ಖಾತೆಗಳ ನೈಜತೆಯನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರಿಗೆ ಪತ್ರ ಸಂಖ್ಯೆ: 277665/ ಡಿಎಂಎ/ ಡಿಇವಿಟಿ/ ಎಂಐಎಸ್‌ಸಿ/ 7/ 2020, ದಿನಾಂಕ: 12-12-2022 ರಂದು ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಪತ್ರ ಬರೆಯಲಾಗಿರುತ್ತದೆ. ಸದರಿ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರಿಂದ ಇಲ್ಲಿಯವರೆಗೆ ಯಾವುದೇ ವರದಿಯು ಪೌರಾಡಳಿತ ನಿರ್ದೇಶನಾಲಯದಲ್ಲಿ ಸ್ವೀಕೃತವಾಗಿರುವುದಿಲ್ಲ. |
| (ಆ) | ಸರ್ವೆ ನಂ.74 ರಲ್ಲಿ ಅಕ್ರಮವಾಗಿ ದಾಖಲಾಗಿರುವ 9 ಖಾತೆಗಳನ್ನು ರದ್ದು ಪಡಿಸಲು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪಟ್ಟಣ ಪಂಚಾಯಿತಿಯ ವತಿಯಿಂದ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಲಾಗಿದೆಯೇ; ಸಲ್ಲಿಸಲಾಗಿದ್ದಲ್ಲಿ ಯಾವ ದಿನಾಂಕದಂದು ಸ್ಲಲಿಸಲಾಗಿದೆ; ಸದರಿ ದಿನಾಂಕದಿಂದ ಇಲ್ಲಿಯವರೆಗೂ ಜಿಲ್ಲಾಧಿಕಾರಿಗಳ ಕಾರ್ಯಾಲಯ ಕೈಗೊಂಡ ಕ್ರಮಗಳೇನು; | ಸರ್ಕಾರಿ ಗೋಮಾಳ ಸರ್ವೆ ನಂ.74 ರಲ್ಲಿ ಅಕ್ರಮವಾಗಿ ದಾಖಲಾಗಿರುವ 9 ಖಾತೆಗಳನ್ನು ರದ್ದು ಪಡಿಸಲು ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ. 322ರ ಅಡಿಯಲ್ಲಿ ದಿನಾಂಕ: 02.06.2023 ರಂದು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪುನರ್ ಪರಿಶೀಲನಾ ಅರ್ಜಿಯನ್ನು ದಾಖಲಿಸಲಾಗಿದೆ. ಸದರಿ ಪ್ರಕರಣಗಳು ವಿಚಾರಣೆ ಹಂತದಲ್ಲಿರುತ್ತದೆ. |

| | | |
|---|---|---|
| (ಇ) | ಸದರಿ ಅಕ್ರಮ ಖಾತೆಗಳನ್ನು ರದ್ದು ಪಡಿಸುವ ಪ್ರಕ್ರಿಯೆಯು ಯಾವ ಹಂತದಲ್ಲಿದೆ; ಅಕ್ರಮ ಖಾತೆಗಳನ್ನು ಶೀಘ್ರವಾಗಿ ರದ್ದುಪಡಿಸಿ, ಸರ್ಕಾರಿ ಆಸ್ತಿಯನ್ನು ರಕ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಸದರಿ ಪ್ರಕರಣಗಳು ಜಿಲ್ಲಾಧಿಕಾರಿಗಳ ವಿಚಾರಣೆ ಹಂತದಲ್ಲಿದ್ದು, ವಿಚಾರಣೆ ನಂತರದ ಆದೇಶದನ್ವಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ. |

**ಇ-ಸಂಖ್ಯೆ: ನಅಇ 19 ಜಿಇಎಲ್ 2024 (ಇ)**

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು

"ಅನುಬಂಧ-1"

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂಖ್ಯೆ: 277665/DMA/DEV/MISC/7/2020

ದಿನಾಂಕ: 12 -12-2022

ಅತೀ ತುರ್ತು

ರವರಿಗೆ
ಜಿಲ್ಲಾಧಿಕಾರಿಗಳು
ರಾಮನಗರ ಜಿಲ್ಲೆ
ರಾಮನಗರ

ಮಾನ್ಯರೇ,

ವಿಷಯ: ಕನಕಪುರ ತಾಲ್ಲೂಕು, ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಹಾರೋಹಳ್ಳಿ ಗ್ರಾಮದ ಸರ್ವೆ ನಂ. 74ರಲ್ಲಿ ದಾಖಲಾಗಿರುವ ನಿವೇಶನಗಳಿಗೆ ಸಂಬಂಧಿಸಿದಂತೆ ಮಾಲೀಕತ್ವದ ಸಾಬೀತುಪಡಿಸುವ ದಾಖಲೆಗಳನ್ನು ಹಾಜರುಪಡಿಸುವ ಬಗ್ಗೆ.

ಉಲ್ಲೇಖ: ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ ಹಾರೋಹಳ್ಳಿರವರ ಪತ್ರ ಸಂಖ್ಯೆ: ಪ.ಪಂ. ಹಾ/ಸಿ.ಆರ್/01/2022-23, ದಿನಾಂಕ 12-12-2022

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕನಕಪುರ ತಾಲ್ಲೂಕು, ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಹಾರೋಹಳ್ಳಿ ಗ್ರಾಮದ ಸರ್ವೆ ನಂ. 74ರಲ್ಲಿ ದಾಖಲಾಗಿರುವ ನಿವೇಶನಗಳಿಗೆ ಸಂಬಂಧಿಸಿದಂತೆ ಮಾಲೀಕತ್ವದ ವಿಷಯವಾಗಿ ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾಗಿರುತ್ತವೆ ಎಂದು ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ ಹಾರೋಹಳ್ಳಿರವರು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ. ಈ ವಿಷಯವಾಗಿ ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ. ಮುನಿರಾಜುಗೌಡ ಪಿ.ಎಂ.ರವರು ಹಾರೋಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ವೆ ನಂ. 74ರಲ್ಲಿ ದಾಖಲಾಗಿರುವ ಅಕ್ರಮ ಖಾತೆಗಳ ಬಗ್ಗೆ ಪ್ರಶ್ನಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸರ್ವೆ ನಂ. 74ರ ನಿವೇಶನಗಳ ನೈಜತೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ, 15 ದಿನಗಳ ಒಳಗಾಗಿ ವರದಿಯನ್ನು ಸಲ್ಲಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಅಡಕಗಳು:

1) ಮುಖ್ಯಾಧಿಕಾಗಳು, ಹಾರೋಹಳ್ಳಿ ಪಟ್ಟಣ ಪಂಚಾಯಿತಿರವರ ದಿನಾಂಕ 12-12-2022ರ ವರದಿ
2) ಜಾರಿ ಮಾಡಿರುವ ನೋಟೀಸ್‌ಗಳ ಪ್ರತಿಗಳು
3) ಸಾರ್ವಜನಿಕರಿಂದ ಸ್ವೀಕೃತವಾದ ದೂರುಗಳ ಪ್ರತಿಗಳು.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮುನಿರಾಜುಗೌಡ.ಪಿ.ಎಂ, (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 18(200) ಕ್ಕೆ ಪೂರಕ ಟಿಪ್ಪಣಿ**

ರಾಮನಗರ ಜಿಲ್ಲೆಯ ಹಾರೋಹಳ್ಳಿ ಗ್ರಾಮ ಪಂಚಾಯಿತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 14 ಎಂಎಲ್ಆರ್ 2020 ದಿನಾಂಕ:06.03.2021 ರ ಆದೇಶದಂತೆ ಹಾರೋಹಳ್ಳಿ ಮತ್ತು ಇತರೆ ಸುತ್ತ ಮುತ್ತಲ ಗ್ರಾಮಗಳನ್ನು ಸೇರಿಸಿ ಹಾರೋಹಳ್ಳಿ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೇಗೇರಿಸಲಾಗಿರುತ್ತದೆ. ಸದರಿ ಹಾರೋಹಳ್ಳಿ ಗ್ರಾಮದ ಸರ್ವೆ ನಂಬರ್:74 ರಲ್ಲಿ ಒಟ್ಟು 09 ಖಾತೆಗಳನ್ನು ಈ ಹಿಂದಿನ ಗ್ರಾಮ ಪಂಚಾಯಿತಿಯಲ್ಲಿ ದಾಖಲಿಸಿ ಪಟ್ಟಣ ಪಂಚಾಯಿತಿಗೆ ಹಸ್ತಾಂತರಿಸಲಾದ ಖಾತೆಗಳಾಗಿರುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ವರದಿ ಸಲ್ಲಿಸುವಂತೆ ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ಪತ್ರ ಸಂಖ್ಯೆ:277665/ಡಿಎಂಎ/ಡಿಇವಿ/ಎಂಎಎಸ್‌ಸಿ/7/2020 ದಿನಾಂಕ:12.12.2022 ರಂದು ಹಾರೋಹಳ್ಳಿ ಗ್ರಾಮದ ಸರ್ವೇ ನಂ.74 ರಲ್ಲಿ ದಾಖಲಾಗಿರುವ ಖಾತೆಗಳ ನೈಜತೆಯನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಪತ್ರದ ಮೂಲಕ ಕೋರಿದೆ. ಇಲ್ಲಿಯ ವರೆಗೆ ಯಾವುದೇ ವರದಿಯ ಮಾಹಿತಿಯು ನಿರ್ದೇಶನಾಲಯಕ್ಕೆ ಸ್ವೀಕೃತವಾಗಿರುವುದಿಲ್ಲ.

ಗ್ರಾಮ ಪಂಚಾಯಿತಿಯಿಂದ ಹಸ್ತಾಂತರಿಸಲಾದ ಖಾತೆಗಳ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ಖಾತೆ ಸಂಖ್ಯೆ | ಹಾಲಿ ಖಾತೆದಾರರ ಹೆಸರು | ಪ್ರಥಮವಾಗಿ ಖಾತೆ ತೆರೆದ ಸಾಲು/ವರ್ಷ |
|---|---|---|---|
| 1 | 183/49 | ವೆಂಕಟರಮಣಯ್ಯ ಬಿನ್ ದಾಸಪ್ಪ | 2008–09 |
| 2 | 53/55/2 | ತಿಮ್ಮಯ್ಯ ಬಿನ್ ಗಾಡಿದೊಡ್ಡಯ್ಯ | 2017–18 |
| 3 | 54/56/3 | ಗೌರಮ್ಮ ಕೋಂ ಗಿಡ್ಡಯ್ಯ | 2017–18 |
| 4 | 5654/3380/121/5 | ನಾರಾಯಣ ಹೆಚ್.ಸಿ ಬಿನ್ ಚಲುವಯ್ಯ | 2019–20 |
| 5 | 5648/3380/15/6 | ಎಂ.ಸುರೇಶ ಬಿನ್ ಲೇಟ್ ಮುನೀರಯ್ಯ | 2019–20 |
| 6 | 66/1 | ನಾಗಮ್ಮ ಕೋಂ ಲೇಟ್ ಕುಮಾರ್ | 2009–10 |
| 7 | 67/2 | ಕೆಂಪಯ್ಯ ಬಿನ್ ರೇವಯ್ಯ | 2009–10 |
| 8 | 69/4 | ಬಾಳೇಗೌಡ ಬಿನ್ ವೀರಭದ್ರೇಗೌಡ | 2009–10 |
| 9 | 68/3 | ಸುಕನ್ಯ ಕೋಂ ವೆಂಕಟೇಶ | 2009–10 |

ಪರಿಶೀಲಿಸಲಾಗಿ, ಸರ್ವೆ ನಂ:74ರ ಸರ್ಕಾರಿ ಗೋಮಾಳದಲ್ಲಿ ಗ್ರಾಮೀಣ ಆಶ್ರಯ ನಿವೇಶನ ಯೋಜನೆಯಡಿ ನಿವೇಶನಗಳಿಗೆ ಹಕ್ಕು ಪತ್ರ ನೀಡಿರುವ ಬಗ್ಗೆ ಆಶ್ರಯ ಸಮಿತಿ ಸಭಾ ನಡಾವಳಿ, ಹಕ್ಕು ಪತ್ರಗಳ ಪ್ರತಿ, ಹಕ್ಕು ಪತ್ರ ವಿತರಣೆ ಮಾಡಿದ ಅಧಿಕಾರಿ ವಿವರ, ವಿತಾರಣಾ ವಹಿಯ ಪ್ರತಿ, ಅನುಮೋದಿತಾ ನಕ್ಷೆಯ ಪ್ರತಿ ಲಭ್ಯವಿರುವುದಿಲ್ಲ ಎಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಕನಕಪುರ ರವರು ವರದಿ ಮಾಡಿರುತ್ತಾರೆ. ಅದರಂತೆ ಸದರಿ 09 ಖಾತೆಗಳನ್ನು ರದ್ದುಪಡಿಸಲು ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಕಲಂ.322 ರ ಅಡಿಯಲ್ಲಿ ದಿನಾಂಕ:02.06.2023 ರಂದು ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ರಿವ್ಯೂ ಪಿಟಿಷನ್ ದಾಖಲಿಸಲಾಗಿದ್ದು, ಸದರಿ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುತ್ತದೆ ಎಂಬ ಮಾಹಿತಿಯನ್ನು ಸಲ್ಲಿಸಿದೆ.

12/2/24

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು.